doc-599
T-P-2

Reg No B C 158

2 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂದರ್ಭದಲ್ಲಿ
ಪ್ರಕಟಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತ ಪಾಕೀಸ್ತಾನಗಳಿಂದ ಸಮರ ಬಂದಿಗಳ ವಾಪಸಾತಿ

ಅಧಿಕಾರಿಗಳ ವಿರೋಧ

ಹೈದರಾಬಾದು— ಆಂಧ್ರದ ವಿವಿಧ ಇಲಾಖೆಯ ಗೆಜಟೆಡ್-ಅಧಿಕಾರಿಗಳ ಸಂಘೀಳನದಲ್ಲಿ, ಮುಲ್ಕಿ ರೂಲ್ಸು ಬಗ್ಗೆ ಪ್ರಧಾನಿಯವರ 5 ಪಾಯಿಂಟ್ ಸೂತ್ರವು ತಿರಸ್ಕರಿಸಲ್ಪಟ್ಟಿತು.

★

ಮಂತ್ರಿಗಳ ಪ್ರವಾಸ ಖರ್ಚು

ನವದೆಹಲಿ — 71-72 ರಲ್ಲಿ ಮಂತ್ರಿಗಳ ಪ್ರವಾಸ ಖರ್ಚು ರೂ. 36 38 ಲಕ್ಷವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು – ಕಳೆದ 3 ವರ್ಷಗಳಲ್ಲಿ ಮಂತ್ರಿಗಳ ಪ್ರವಾಸ ಖರ್ಚು ಒಟ್ಟು ರೂ. 73 ಲಕ್ಷಕ್ಕೂ ಹೆಚ್ಚಾಗಿದ್ದಿತು – ಕಳೆದ 3 ವರ್ಷಗಳಲ್ಲಿ ಸರ್ಕಾರಿ ಮಂತ್ರಿಗಳ ಸಂಬಳಕ್ಕಾಗಿ ರೂ 31 17 ಲಕ್ಷ ಮತ್ತು ಅವರ ವೈಯ ನಿಯಂತ್ರಕ ಅಲೋಯನ್ಸಿಗಾಗಿ ರೂ. 3 ಲಕ್ಷ ಖರ್ಚುಮಾಡಿದೆ.

★

ಬೀಳ್ಕೊಡುವ ಸಮಾರಂಭ

ಮೈಸೂರು— ಕಡ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿರುವ ಜಿಲ್ಲಾ ವಾರ್ತಾಧಿಕಾರಿಯಂದ ಶ್ರೀ ವಿಜಯಕುಮಾರ್ ರವರ ಗೌರವಾರ್ಥವಾಗಿ ಗುರುವಾರ ಇಲ್ಲಿಯ ವಾರ್ತಾ ಕಛೇರಿ ನೌಕರರು ಬೀಳ್ಕೊಡುವ ಸಮಾರಂಭವನ್ನು ವಸ್ತುಪ್ರದರ್ಶನದ ಕಾರ್ಯದರ್ಶಿ ಶ್ರೀ ಗಂಗಣ್ಣನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಶ್ರೀಯುತರ ಸೇವೆ ಪ್ರಶಂಸಿಸಲಾಯಿತು : ಅವರು ಧನ್ಯವಾದಗಳನ್ನರ್ಪಿಸಿದರು.

●

ಲಲಿತಕಲಾ ಮಹೋತ್ಸವ

ಮೈಸೂರು— ಪುರಸಭೆಯ ಆಶ್ರಯದಲ್ಲಿ ತಾ || 6-12-72 ರಿಂದ ನಡೆಯಲೇರ್ಪಟ್ಟಿದ್ದ ಲಲಿತಕಲಾ ಮಹೋತ್ಸವವನ್ನು ತಾ|| 9-12-72 ರಿಂದ ನಡೆಸಲು ನಿರ್ಧರಿಸಲಾಗಿದ್ದು, ಸಾರ್ವಜನಿಕರ ಸಹಕಾರವನ್ನು ಕೋರಲಾಗಿದೆ.

ರಿಟ್ ಅರ್ಜಿಗೆ ರೂ. 100

ಬೆಂಗಳೂರು— ರಿಟ್ ಅರ್ಜಿಗಳಿಗೆ ಈಗಿರುವ ಕೋರ್ಟ್ ಫೀಯನ್ನು ರೂ. 100 ಕ್ಕೆ ಹೆಚ್ಚಿಸುವ ಮಸೂದೆ ಶಾಸನ ಸಭೆಯಲ್ಲಿ ಮಂಜೂರಾಯಿತು.

★

ನಿರುದ್ಯೋಗ ಪಿಡಂಭೂತ !

ನವದೆಹಲಿ— ದೇಶದಲ್ಲಿನ ಭಯಂಕರ ನಿರುದ್ಯೋಗ ಪರಿಸ್ಥಿತಿಯನ್ನು ಎದುರಿಸಲು ಸರಕಾರ ಈ ವರ್ಷ ರೂ. 180 ಕೋಟಿಗೂ ಹೆಚ್ಚು ಖರ್ಚು ಮಾಡಲಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ಶ್ರೀರಂಗಪಟ್ಟಣ ಮುನಿಸಿಪಾಲಿಟಿ

ಮಂಡ್ಯ— ಶ್ರೀರಂಗಪಟ್ಟಣ ಮುನಿಸಿಪಾಲಿಟಿಯನ್ನು ರದ್ದುಪಡಿಸಿ, ಹೊಸ ಚುನಾವಣೆ ವರೆಗೆ ತಾಸಿಲ್ದಾರರ ಆಡಳಿತದಲ್ಲಿ ಡಲಾಗಿದೆ

○

ಕೂಗಿಕೊಳ್ಳು ಹೊತ್ತು

ನವದೆಹಲಿ — ಲೋಕಸಭೆಯಲ್ಲಿ ಪ್ರಶ್ನೆ ಹೊತ್ತನ್ನು ಕೂಗಿಕೊಳ್ಳು ಹೊತ್ತು ಎಂದು ಪುನರ್ನಾಮವಿಡುವಂತಾಗಿದೆಯೆಂದು ಸ್ಪೀಕರರು ಹೇಳಿದರು.

ದೇವರು ಕೊಡುವ ತಿರುವಳಿಕೆಯಂತೆ !

ಮನಿಲಾ— ತಾವು ಮಿಲಿಟರಿ ಶಾಸನ ಜಾರಿಮಾಡಿರುವದು, ದೇವರು ಕೊಟ್ಟ ತಿರುವಳಿಕೆಯೆಂದು ಅಧ್ಯಕ್ಷೆ ಫರ್ಡಿನೆಂಡ್ ಮಾಲ್ಕಾಸ್ ಹೇಳಿರುವರು – ತಾವು ದೇವರೊಡನೆ ಸಂಪರ್ಕ ಹೊಂದಿದಾಗ ದೇವರು ಹಲವು ಚಿಹ್ನೆಗಳ ಮೂಲಕ ಸೂಚನೆ ಕೊಡುವನೆಂದು ಹೇಳುತ್ತಾರೆ !

ಪಾಶ್ಚಾತ್ಯ ಔಷಧಗಳು

ಲಂಡನ್— ಪಾಶ್ಚಾತ್ಯ ಔಷಧಗಳು ಬಡ ದೇಶಗಳಿಗೆ ಕೆಟ್ಟವುಗಳೆಂದು ಹೆಲ್ತ್ ಎಕನಾಮಿಕ್ಸ್ ಕಚೇರಿ ಪ್ರಕಟಿಸಿದೆ.

ಯುದ್ಧ ಖೈದಿಗಳು

ಅಮೃತಸರ — ವಾಘಾ ಗಡಿ ಮೂಲಕ ಭಾರತ ಮತ್ತು ಪಾಕಿಸ್ತಾನಗಳು, ಕಳೆದ ವರ್ಷದ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ಯುದ್ಧ ಖೈದಿಗಳನ್ನು ಸ್ವದೇಶಗಳಿಗೆ ವಾಪಸು ಕಳುಹಿಸಿದವು – ಪಾಕಿಸ್ತಾನಕ್ಕೆ 540 ಮಂದಿ ಕಳುಹಿಸಿ, ಅಲ್ಲಿಂದ 616 ಮಂದಿಯನ್ನು ಭಾರತ ಪಡೆಯಿತು.

ಕಾಲ ಪಕ್ವವಾಗಿಲ್ಲ

ನವದೆಹಲಿ— ರಷ್ಯಾದೊಡನೆ ಮಾಡಿಕೊಂಡಿರುವ ಒಪ್ಪಂದದಂತೆ ಪಾಕಿಸ್ತಾನದೊಡನೆ ಒಪ್ಪಂದಕ್ಕೆ ರುಜುಮಾಡುವ ಕಾಲ ಇನ್ನೂ ಪಕ್ವವಾಗಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಬಂಗ್ಲಾದೇಶಕ್ಕೆ ಮನ್ನಣೆ

ರಾವಲ್ಪಿಂಡಿ— ಭಾರಿ ಸಮೂಹಿಕ ಬೈಲು ಪ್ರದೇಶದಲ್ಲಿನ ಒಂದು ಅಕ್ಷಕ್ಕೂ ಹೆಚ್ಚು ಜನರಿದ್ದ ಸಭೆಯಲ್ಲಿ, ಅಧ್ಯಕ್ಷ ಭುಟ್ಟೋರವರು, ಬಂಗ್ಲಾ ದೇಶಕ್ಕೆ ಮನ್ನಣೆ ಕೊಡುವ ವಿಷಯ ಎತ್ತಲು, ಒಪ್ಪುವುದಿಲ್ಲ ಎಂದು ಸಹಸ್ರಗಟ್ಟಲೆ ಜನರು ಕೈಎಡಿಸಿ ಕೂಗಿಕೊಂಡಾಗ, ಗಲಿಬಿಲಿಯಾಗಿ, ಪೋಲೀಸರು ಗುಂಡುಹಾರಿಸಿದರು.

●

ಪ್ರಧಾನಿಯವರಿಗೆ ಆಹ್ವಾನ

ರಾವಲ್ಪಿಂಡಿ— ಭಾರತ ಪ್ರಧಾನಿ ಇಂದಿರಾರವರನ್ನು ಪಾಕಿಸ್ತಾನಕ್ಕೆ ಭೇಟಿ ಕೊಡಲು ಅಧ್ಯಕ್ಷ ಭುಟ್ಟೊ ಆಹ್ವಾನಿಸಿರುವರು

○

ದಿವ್ಯವಾಣಿ

ಲಂಚದಿಂದ ಪಡೆದ ಪ್ರಾಮಾಣಿಕತೆ ಲಂಚವಿಂದಲೇ ಗೆಲ್ಲಲ್ಪಡುವುದು.– ಬೆನಿಕ

ಅಭಾವ ಪರಿಸ್ಥಿತಿ ವ್ಯಾಸಂಗ

ಬೆಂಗಳೂರು— ಅಭಾವ ಪ್ರದೇಶಗಳಲ್ಲಿನ ಪರಿಸ್ಥಿತಿ ವ್ಯಾಸಂಗಕ್ಕೆ 20 ಸದಸ್ಯರ ತಂಡವನ್ನು ಮುಖ್ಯ ಮಂತ್ರಿಗಳು ಪ್ರಕಟಿಸಿದರು – ಆಡಳಿತ ಪಕ್ಷದವರು 11 ಮಂದಿ ಇರುವರು

★

ಲಾಕ್‌ಔಟ್ ತೆಗೆಯಲು

ಬೆಂಗಳೂರು— ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಲಾಕ್‌ಔಟನ್ನು, ಕಾರ್ಮಿಕ ಪ್ರತಿನಿಧಿಗಳು ತಿಪ್ಪಾ, ಶಾಂತಿ ಮತ್ತು ಉತ್ಪಾದನೆಯ ಬಗ್ಗೆ ಭರವಸೆ ಕೊಟ್ಟರೆ, ತಕ್ಷಣ ತೆಗೆಯಲಾಗುವದೆಂದು ಕಾರ್ಮಿಕ ಮಂತ್ರಿ ಶ್ರೀ ಅಜೀಜ್‌ಸೇಟ್‌ರವರು ಹೇಳಿದರು

★

ಪ್ರತಿಬಂಧಕವಿಲ್ಲ

ನವದೆಹಲಿ— ಕಂಪೆನಿಗಳ ಲಾಭ ಮತ್ತು ನಷ್ಟ ಭಾಗಗಳ ಮೇಲೆ ಪ್ರತಿಬಂಧಕ ಹಾಕುವ ವಿಷಯ ಸರಕಾರದ ಯೋಚನೆಯಲ್ಲಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಮೇವು ಸರಬರಾಜು

ಬೆಂಗಳೂರು— 500 ಲಾರಿ ತುಂಬಾ ಮೇವನ್ನು ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಅಭಾವ ಭಾಗಗಳಿಗೆ ನವೆಂಬರು 21 ರಿಂದ 27 ರವರೆಗೆ ಕಳುಹಿಸಲಾಗಿದೆ ಎಂದು ಪ್ರಕಟವಾಗಿದೆ

●

ಅನ್ನ ಸತ್ಯಾಗ್ರಹ

ಹುಬ್ಬಳ್ಳಿ— ಶಿಕ್ಷಣ ಶುಲ್ಕ ಹೆಚ್ಚಿಸಿರುವುದರ ವಿರುದ್ಧ 5 ದಿನಗಳಿಂದ ನಡೆಯುತ್ತಿರುವ ಚಳವಳಿ ಜೊತೆಗೆ ಇಬ್ಬರು ವಿದ್ಯಾರ್ಥಿಗಳು ಅನಿರ್ದಿಷ್ಟ ಕಾಲದ ಉಪವಾಸ ಪ್ರಾರಂಭಿಸಿರುವರು.

●

ವುಡ್‌ಲಾಂಡ್ 1 12 72 ರಿಂದ ಆನೋಘ ಪ್ರಾರಂಭ

ಆಲ್ ಇಂಡಿಯಾ ಪಿಕ್ಚರ್ಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ದಿಲ್ ದೌಲತ್ ದುನಿಯಾ

ಪಾತ್ರ – ರಾಜೇಶ್ ಖನ್ನ, ಸಾಧನ, ಅಶೋಕ ಕುಮಾರ್, ಹೆಲೆ,
ಓ. ಪ್ರಕಾಶ್ ಸಂಗೀತ : ಶಂಕರ್ ಜೈಕಿಷನ್ ದಿನ 3 ಪ್ರದರ್ಶನಗಳು

ಜೆಳಗಿನ ಪ್ರದರ್ಶನ 10–30 ಬೆಲಂದ್

ಅಪೆರಾ 1 12 72 ರಿಂದ

ಅತ್ಯಮೋಘ ಹಿಂದಿ ಗೀತ ಕಲರ್ ಚಿತ್ರ

ಏಕ್ ಬಾರ್ ಮುಸ್ಕುರದೊ

ಪಾತ್ರ : ಜಾಯ್ ಮುಖರ್ಜಿ, ತನುಜಾ, ದೇವ್ ಮುಖರ್ಜಿ
ಸಂಗೀತ – ಓ.ಪಿ. ನಯ್ಯರ್ ದಿನ 3 ಪ್ರದರ್ಶನಗಳು



Protect the Cow

Help The Gorakshana

— Humanitarian Propoganda Monthly —

Edited Printedand Published by Dharmapracharanirata M S Krishna Rao (Propretor) at the Satyavadi Press, Chamarajapuram Mysore

ಕರಂಜಾ ಯೋಜನೆ ಕಾಲುವೆ ಕಾಮಗಾರಿ

ಬೆಂಗಳೂರು— ಬೀದರು ಜಿಲ್ಲೆಯ ಕರಂಜಾ ಯೋಜನೆಯ ಎಡದಂಡೆ ಕಾಲುವೆ ಕಾಮಗಾರಿಯಲ್ಲಿ ಒಂದು ಸಾವಿರದ ಮುನ್ನೂರು ಜನರಿಗೆ ಉದ್ಯೋಗ ಒದಗಿಸಲಾಗಿದೆ ; ಬಲದಂಡೆ ಕೆಲಸವೂ ಕೂಡ ಒಂದೆರಡು ದಿನಗಳಲ್ಲೇ ಆರಂಭವಾಗಲಿದ್ದು ಇದರಿಂದ ಬಂದು ಸಾವಿರ ಜನರಿಗೆ ಉದ್ಯೋಗ ಒದಗಲಿದೆ ಎಂದು ಜಿಲ್ಲಾಧಿಕಾರಿ ಶ್ರೀ ರಾಜಶೇಖರಪ್ಪನವರು ಸುದ್ದಿಗಾರರಿಗೆ ತಿಳಿಸಿದರು.

★

ಕೈಗಾರಿಕಾ ಎಸ್ಟೇಟ್

ಬೆಂಗಳೂರು— ಕೋಲಾರ ಮತ್ತು ಚಿನ್ನಡ ಗಣಿ ನಡುವೆ ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್‌ಗೆ ಹೊಂದಿಕೊಂಡಂತೆ ಕೈಗಾರಿಕಾ ಎಸ್ಟೇಟ್ ಒಂದನ್ನು ಪ್ರಾರಂಭಿಸಲು ನಿರ್ಧರಿಸಿದೆ ಎಂದು ಕೈಗಾರಿಕಾ ಸಚಿವ ಶ್ರೀ.ಎಸ್. ಎಂ.ಕೃಷ್ಣರವರು ಕೋಲಾರದಲ್ಲಿ ತಿಳಿಸಿದರು.

ಉಳಿತಾಯ ಪರ್ಯಾಯ ಪಾರಿತೋಷಕ

ಬೆಂಗಳೂರು— ಕಳೆದ ವರ್ಷ ರಾಷ್ಟ್ರೀಯ ಉಳಿತಾಯ ಯೋಜನೆಯ ಕೆಳಗೆ ರೂ. 21 ಲಕ್ಷ ಸಂಗ್ರಹಿಸಿದ್ದಕ್ಕಾಗಿ ಕೋಲಾರ ಜಿಲ್ಲೆಗೆ ಪರ್ಯಾಯ ಪಾರಿತೋಷಕ ದೊರಕಿದೆ ; ಜಿಲ್ಲೆಗೆ ನಿಗದಿಯಾಗಿದ್ದ ಗುರಿ ರೂ. ಲಕ್ಷ.

★

SHAKTI SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

ಛತ್ರಿ, ರೇನ್‌ಕೋಟು, ಸೂಟು ಕೇಸು, ಹೋಲ್‌ಆಲ್, ಕಿಟ್‌ಬಾಗ್‌ಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್ ಮೈಸೂರು